# ಬಂಧನದಿಂದ ಬಿಡುಗಡೆ

ಸಂಗ್ರಹ : ಸುನಯನ ವಾಲ್ಟರ್ಸ್

ಪಕ್ಷಿಗಳಿಗೆ ಕಾಳು ಉಣಿಸುವ ಸಣ್ಣ ಗೂಡೊಂದು ಆ ಮನೆಯ ಹಿಂಭಾಗದ ತೋಟದಲ್ಲಿತ್ತು. ಗೂಡಿನೊಳಗೆ ತುಂಬಾ ಸೂರ್ಯಕಾಂತಿ ಬೀಜಗಳು ತುಂಬಿದ್ದವು. ಮುಂದಿನ ಶುಭ್ರವಾದ ಪ್ಲಾಸ್ಟಿಕ್ ಕಿಟಕಿಯು ಕೆಳಭಾಗದಿಂದ ಖಾಲಿಯಾದಂತೆಲ್ಲಾ ಸ್ವಲ್ಪ ಸ್ವಲ್ಪ ಕಾಳು ಹೊರಗೆ ಬರುವಂತಿತ್ತು. ಹಸಿದ ಹಕ್ಕಿಗಳ ಹಾರಾಟ ಅಲ್ಲಿ ಸತತವಾಗಿತ್ತು.

ಒಂದು ಚಿಕ್ಕ ಪಕ್ಷಿ ದುರಾಸೆಯಿಂದ ಹೇಗೋ ಆ ಪ್ಲಾಸ್ಟಿಕ್ ಕಿಟಕಿಯ ಕೆಳಭಾಗದಿಂದ ಒಳಗೆ ನುಸುಳಿತು. ಓ... ಎಷ್ಟೊಂದು ರಾಶಿ ಕಾಳುಗಳು! ಎಷ್ಟು ಬೇಕಾದರೂ ಕಬಳಿಸಬಹುದೆಂದು ಸಂತಸಪಡುತ್ತಿರುವಂತೆಯೇ, ಫಕ್ಕನೆ ತಾನಲ್ಲಿ ಬಂಧಿಯಾಗಿದ್ದೇನೆಂಬ ಅರಿವು ಪಕ್ಷಿಗೆ ಉಂಟಾಯಿತು. ಈಗ ಅದಕ್ಕೆ ಕಾಳುಗಳನ್ನು ತಿನ್ನುವುದರಲ್ಲಿ ಯಾವ ಆಸಕ್ತಿಯೂ ಉಳಿಯಲಿಲ್ಲ. ಹೊರಗೆ ಬರುವ ಚಿಂತೆಯಷ್ಟೇ ಉಳಿಯಿತು. ಒಳಗೆ ಪ್ರವೇಶಿಸಿದಲ್ಲಿಂದಲೇ ಹೊರಬರಲು ಸರ್ವಪ್ರಯತ್ನ ಮಾಡಿತು. ರೆಕ್ಕೆ ಬಡಿದು ಬಡಿದು ಗಾಬರಿಗೊಂಡು ಹಾರಾಡಿತು.

ಕೆಳಗೆ ನೆಲದ ಮೇಲೆ ಬಿಸಿಲು ಕಾಯಿಸುತ್ತಾ ಬೆಕ್ಕೊಂದು ಮಲಗಿತ್ತು. ಫಕ್ಕನೆ ಅದರ ದೃಷ್ಟಿ ಗೂಡಿನೊಳಗೆ ಬಂಧಿಯಾದ ಚಿಕ್ಕ ಹಕ್ಕಿಯ ಮೇಲೆ ನೆಟ್ಟಿತು. ಹೊರಗಿರುವ ಪಕ್ಷಿಗಳನ್ನು ಬೇಟೆ ಯಾಡುವುದಕ್ಕಿಂತ, ಈ ಪಕ್ಷಿಯನ್ನು ಹಿಡಿಯುವುದೇ ಸುಲಭವೆಂದು ಅದಕ್ಕೆ ಹೊಳೆದಿರಬೇಕು. ಕೂಡಲೇ ಗೂಡನ್ನಿಟ್ಟಿದ್ದ ಕಂಬವನ್ನೇರಿ ನೋಡಿತು. ಕಾಳು ಬೀಳುವಲ್ಲಿ ಹೋಗಲು ಸಾಧ್ಯವಿಲ್ಲ! ಮೇಲೆ ಹಾರಿ, ಗೂಡಿನ ಮಾಡಿನ ಮೇಲೆ ಏರಿ, ಬಗ್ಗಿ ಇನ್ನೂ ರೆಕ್ಕೆ ಬಡಿದು ಹಾರುತ್ತಿರುವ ಹಕ್ಕಿಯೆಡೆಗೆ ಇಣುಕಿ ನೋಡಿತು.



ಈ ಕೆಟ್ಟ ವೈರಿಯ ಮುಖ ನೋಡಿದ ಕೂಡಲೇ ಹಕ್ಕಿಗಾದ ಭಯವನ್ನು ಊಹಿಸಿರಿ! ಕೆಲವೇ ಅಂಗುಲಗಳ ದೂರದಲ್ಲಿ ವೈರಿ!



ನಿಮ್ಮ ಮನೆ ಸುತ್ತಲೂ ವೈರಿಯು ಓಡಾಡುತ್ತಿದ್ದರೆ ನೀವೇನು ಮಾಡುವಿರಿ? ಆದಷ್ಟು ಬೇಗನೇ ಸುರಕ್ಷಿತ ಸ್ಥಳದತ್ತ ಓಡುವಿರಲ್ಲ. ನಮ್ಮ ವೈರಿಯೊಬ್ಬನು ಸದಾ ಕಾಯುತ್ತಲೇ ಇರುತ್ತಾನೆ. ನಾವು ಅವನನ್ನು ಕಾಣಲಾರೆವು. ಆದರೆ ಅವನು ನಮ್ಮನ್ನು ಕಾಣಬಲ್ಲನು! ಅವನ ಹೆಸರು ಸೈತಾನನು. ಆದರೆ ನಮಗೆ ಓಡಿಹೋಗಿ ರಕ್ಷಣೆ ಪಡೆದುಕೊಳ್ಳಲು ದೇವರು ಒಂದು ಸುರಕ್ಷಿತ ತಾಣವನ್ನು ಕೊಟ್ಟಿದ್ದಾನೆ.

ಆ ಬೆಕ್ಕು ಒಳಹೋಗಲು ಸರ್ವಪ್ರಯತ್ನ ಮಾಡಿತು. ಕೆಳಗೆ ಬಗ್ಗಿ, ಅಗಲ ಕಿರಿದಾದ ಎಡೆಗೆ ಕೈಚಾಚಿತು. ಊಹೂಂ... ಆಗಲಿಲ್ಲ. ಮೇಲಿನಿಂದ ಅಲ್ಲಿಗೆ ಹಾರಲು ಎಳಸಿತು. ಆದರೆ ಜಾರಿ ಕೆಳಗೆ ಹುಲ್ಲಿನ ಮೇಲೆ ಬಿತ್ತು. ತಿರಿಗಿ ಮೇಲೆ ಹತ್ತಿ ಕೆಳಗೆ ಉರುಳಿಬಿತ್ತು. ಆದರೆ ತಿರಿತಿರಿಗಿ ಪ್ರಯತ್ನ ನಡೆದೇ ಇತ್ತು. ಕೊನೆಗೂ ಮನೆಯ ಯಜಮಾನರು ಅದನ್ನು ಕಂಡರು. ಬೆಕ್ಕನ್ನು ಓಡಿಸಿ, ಮೇಲಿನ ಮಾಡು ಎತ್ತಿ ಹಕ್ಕಿಯನ್ನು ಸ್ವತಂತ್ರಗೊಳಿಸಿದರು.

ಆ ಚಿಕ್ಕ ಪಕ್ಷಿಗೆ ಬೆಕ್ಕು ದೊಡ್ಡ ಶತ್ರುವಾಗಿತ್ತು... ಸೈತಾನನು ನಮಗಿದ್ದಂತೆ. ದೇವರ ವಾಕ್ಯ ಹೇಳುತ್ತದೆ – *"ಎಚ್ಚರದಿಂದಿರಿ! ಏಕೆಂದರೆ ನಿಮ್ಮ ವಿರೋಧಿಯಾಗಿರುವ ಸೈತಾನನು ಗರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ತಿರುಗುತ್ತಾನೆ"* (1 ಪೇತ್ರ 5:8). ನೀವು ಯೇಸುವಿನವರಾಗದಿದ್ದರೆ, ನಿಮಗೆ ಸುರಕ್ಷಿತ ತಾಣವಿಲ್ಲದೇ ಹೋಗಿ ಸೈತಾನನ ಬಲೆಗೆ ಸಿಲುಕಿಕೊಳ್ಳುವಿರಿ.

ಯೇಸು ಸ್ವಾಮಿಯು ನಿಮ್ಮನ್ನು ಪ್ರೀತಿಸುತ್ತಾನೆ. ನಿಮ್ಮನ್ನು ಬಿಡುಗಡೆಗೊಳಿಸಬಲ್ಲನು. ಆತನು ಮರಣವನ್ನೂ ಸೈತಾನನನ್ನೂ ಜಯಿಸಿದ್ದಾನೆ ಮತ್ತು ಆತನ ಪವಿತ್ರ ರಕ್ತವು ನಿಮ್ಮ ಪಾಪದ ಎಲ್ಲಾ ಕಲೆಗಳನ್ನು ತೊಳೆಯಬಲ್ಲುದು. ತನ್ನ ಘನವಾದ ಶಕ್ತಿಯಿಂದ ಆತನಷ್ಟೇ ನಿಮಗೆ ಸದಾಕಾಲ ಸುರಕ್ಷತೆಯನ್ನು ನೀಡಬಲ್ಲವನಾಗಿದ್ದಾನೆ.

*"ಆದುದರಿಂದ ಮಗನು ನಿಮ್ಮನ್ನು ಬಿಡುಗಡೆ ಮಾಡಿದರೆ ನಿಜವಾಗಿ ನಿಮಗೆ ಬಿಡುಗಡೆಯಾಗುವುದು"* (ಯೋಹಾನ 8:36)

ನಿಮ್ಮ ಬಿಡುಗಡೆಗಾಗಿ ಯೇಸುಸ್ವಾಮಿಗೆ ಅವಕಾಶ ನೀಡುವಿರಾ? ■